ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆನಂದ ರಾವ್ ವೃತ್ತ, ಬೆಂಗಳೂರು-560009
ದೂ ಸಂಖ್ಯೆ: 08022341985,
ಮಿಂಚಂಚೆ: uhckar@gmail.com

ಕರ್ನಾಟಕ ಸರ್ಕಾರ

ಸಂಖ್ಯೆ:**HFW/NHM/UHC/ Recruitment /06/2020-21** ದಿನಾಂಕ::03-08-2020

## ಅಧಿಕೃತಾ ಜ್ಞಾಪನಾ ಪತ್ರ

**ವಿಷಯ :** NHM ಅಡಿಯಲ್ಲಿ ಎಂ.ಎಲ್.ಹೆಚ್.ಪಿ ಆಯ್ಕಾ ಪ್ರಕ್ರಿಯೆಯಲ್ಲಿ ಕೋವಿಡ್-19 ಪಾಸಿಟೀವ್ ಅಭ್ಯರ್ಥಿಗಳಿಗೆ ಸಿ.ಸಿ.ಸಿ ಕೇಂದ್ರಗಳಲ್ಲಿ ಪರೀಕ್ಷೆ ನಡೆಸುವ ಕುರಿತು.

**ಉಲ್ಲೇಖ :**
1. ಕರ್ನಾಟಕ ಸರ್ಕಾರದ ನಡಾವಳಿಗಳು ಸರ್ಕಾರದ ಆದೇಶ ಸಂಖ್ಯೆ: ಆಕುಕ 129 ಸಿಜಿಎಮ್ 2020-20. ಬೆಂಗಳೂರು ದಿನಾಂಕ:18-06-2020.
2. ಎಂ.ಎಲ್.ಹೆಚ್.ಪಿ ನೇಮಕಾತಿ ಸುತ್ತೋಲೆ ಸಂಖ್ಯೆ: NHM /CPHC-UHC/MLHP Recruitment/06/2020-21. ದಿನಾಂಕ:22-06-2020.
3. ಈ ಕಛೇರಿಯ ಪತ್ರ ಸಂಖ್ಯೆ: **HFW/NHM/UHC/ Recruitment /06/2020-21** ದಿನಾಂಕ::30-07-2020.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರೋಗ್ಯ ಕ್ಷೇಮ ಕೇಂದ್ರಗಳಿಗೆ ಎನ್.ಹೆಚ್.ಎಂ ಅಡಿಯಲ್ಲಿ 1356 ಬಿ.ಎಸ್.ಸಿ ನರ್ಸಿಂಗ್ ಪದವಿದರರನ್ನು ಆನ್‌ಲೈನ್ ಪರೀಕ್ಷೆ ಮೂಲಕ ಆಯ್ಕೆಮಾಡಲು ಉಲ್ಲೇಖ (1) ರಂತೆ ಕ್ರಮವಹಿಸಲಾಗುತ್ತದೆ. ಈ ಸಂಬಂಧ ಜಿಲ್ಲಾವಾರು ಜಿಲ್ಲಾ ಆರೋಗ್ಯ ಸಂಘದಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲು ಉಲ್ಲೇಖಿತ ಪತ್ರಗಳಲ್ಲಿ ನಿರ್ದೇಶನವನ್ನು ನೀಡಲಾಗಿದೆ.

ನಿಮ್ಮ ಅಧೀನ ಜಿಲ್ಲೆಗಳಲ್ಲಿ ಅರ್ಹತಾ ಪರೀಕ್ಷೆ ನಡೆಸುವ ಕೇಂದ್ರಗಳಿಗೆ ದಿನಾಂಕ:05-08-2020 ರಂದು ನಡೆಯುವ ಆನ್‌ಲೈನ್ ಪರೀಕ್ಷೆಗೆ ಜವಬ್ದಾರಿಯುತ ಅಧಿಕಾರಿಗಳನ್ನು ಪರಿವೀಕ್ಷಕ (Invigilator) ರನ್ನಾಗಿ ನೇಮಿಸಲು ಸೂಚಿಸುತ್ತಾ, ಆಂಬ್ಯುಲೆನ್ಸ್ ವ್ಯವಸ್ಥೆ, ಶಂಕಿತರಲ್ಲಿ RAT ತಪಾಸಣೆ ಹಾಗು ಸೂಕ್ತ ಪೋಲೀಸ್ ಬಂದೂಬಸ್ತ್‌ನೊಂದಿಗೆ ಆಯ್ಕಾ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಲು ಕೋರಿದೆ.

ಇದರೊಂದಿಗೆ ಕೋವಿಡ್-19 ಪಾಸಿಟೀವ್ ಇರುವ ಅಭ್ಯರ್ಥಿಗಳಿಗೆ ಸಿ.ಸಿ.ಸಿ ಕೇಂದ್ರಗಳಲ್ಲಿ ವೈದ್ಯಕೀಯ ಪರವೀಕ್ಷಣೆಯೊಂದಿಗೆ ಇಂಟರ್‌ನೆಟ್ ಸೌಲಭ್ಯವಿರುವ ಟ್ಯಾಬ್ಲೆಟ್ ಡಿವೈಸ್‌ಗಳನ್ನು ನೀಡಿ ಆನ್‌ಲೈನ್ ಪರೀಕ್ಷೆಯನ್ನು ನಡೆಸಲು ಕ್ರಮ ವಹಿಸುವುದು.

ಸಿ.ಸಿ.ಸಿ ಪರೀಕ್ಷಾ ಕೇಂದ್ರಗಳಲ್ಲಿ ಕೋವಿಡ್-19 ಕ್ಕೆ ಸಂಬಂದಿಸಿದಂತೆ SOP (Standard Operational Procedure) ಮಾರ್ಗಸೂಚಿಯನ್ನು ಅನುಸರಿಸಲು ಹಾಗೂ ತತ್ಸಂಬಂಧ ಕಿಯೋನಿಕ್ಸ್ ಸಂಸ್ಥೆ ಹಾಗೂ ಸಿ.ಸಿ.ಸಿ ಕೇಂದ್ರಗಳ ಸಂಯೋಜನೆಯೊಂದಿಗೆ ಆನ್‌ಲೈನ್ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲು ಜಿಲ್ಲೆಯ ಇ-ಆಸ್ಪತ್ರೆ ಪ್ರೋಗ್ರಾಮರ್ ಗಳನ್ನು ನಿಯೋಜಿಸಲು ಸೂಚಿಸಿದೆ.

ಅರುಂಧತಿ 3/8/20

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ನೀಡಿದೆ.**

1. ವಿಭಾಗೀಯ ಜಂಟಿ ನಿರ್ದೇಶಕರು, ಕಲಬುರ್ಗಿ, ಧಾರವಾಡ, ಮೈಸೂರು ಹಾಗೂ ಬೆಂಗಳೂರು ವಿಭಾಗ.
2. ಜಿಲ್ಲಾ ನೋಡಲ್ ಅಧಿಕಾರಿಗಳು, ಚಾಮರಾಜನಗರ, ಚಿತ್ರದುರ್ಗ, ಗದಗ, ಹಾವೇರಿ, ಶಿವಮೊಗ್ಗ, ಉತ್ತರ ಕನ್ನಡ, ಬಾಗಲಕೋಟೆ, ಚಿಕ್ಕಮಗಳೂರು, ರಾಯಚೂರು, ವಿಜಯಪುರ, ಬೆಂಗಳೂರು ನಗರ ಜಿಲ್ಲೆಗಳು.

3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು/ ಜಿಲ್ಲಾ ಕುಷ್ಠರೋಗ ಅಧಿಕಾರಿಗಳು/ ಜಿಲ್ಲಾ ಸರ್ವೇಕ್ಷಾಧಿಕಾರಿಗಳು/ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ಚಾಮರಾಜನಗರ, ಚಿತ್ರದುರ್ಗ, ಗದಗ, ಹಾವೇರಿ, ಶಿವಮೊಗ್ಗ, ಉತ್ತರ ಕನ್ನಡ, ಬಾಗಲಕೋಟೆ, ಚಿಕ್ಕಮಗಳೂರು, ರಾಯಚೂರು, ವಿಜಯಪುರ, ಬೆಂಗಳೂರು ನಗರ – ಜಿಲ್ಲೆಗಳು.
4. ಉಪ ನಿರ್ದೇಶಕರು, ಇ– ಆಸ್ಪತ್ರೆ ಕಾರ್ಯಕ್ರಮ, ಎನ್.ಹೆಚ್.ಎಂ, ಬೆಂಗಳೂರು.
5. ವಿಭಾಗೀಯ ಸಮಲೋಚಕರು, TILC-PHFI, ಬೆಂಗಳೂರು ಸೂಕ್ತ ಕ್ರಮ ವಹಿಸಲು ಸೂಚಿಸಿದೆ.
6. ಎಲ್ಲಾ ಜಿಲ್ಲೆಯ ಇ–ಆಸ್ಪತ್ರೆ ಪ್ರೋಗ್ರಾಮರ್ ಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕು.ಕ ಇಲಾಖೆ ವಿಕಾಸಸೌಧ ಬೆಂಗಳೂರು.
2. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಎನ್.ಹೆಚ್.ಎಂ ಬೆಂಗಳೂರು.
4. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು, ಎನ್.ಹೆಚ್.ಎಂ ಬೆಂಗಳೂರು.
5. ವ್ಯವಸ್ಥಾಪಕರು, ಕಿಯೋನಿಕ್ಸ್, ಬೆಂಗಳೂರು.